ಓ ಎಸ್ ನಂ.70/2022
ಸಿ.ಡಬ್ಲ್ಯೂ-1 ಮಲ್ಲಿನಾಥ ತಂದೆ ವಿಜಯಕುಮಾರ ಮಾಶಾಳ
ವಯಸ್ಸು : ೩೩ ವರ್ಷ
ಉದ್ಯೋಗ : ಸರ್ವೇಯರ್
ವಾಸ : ಅಫಜಲಪೂರ.

**(ಇಂದು ದಿನಾಂಕಃ 29-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಮುಖ್ಯ ವಿಚಾರಣೆಃ ಶ್ರೀ ಎ ಎಸ್ ಕೆ ವಕೀಲರಿಂದ.

ನ್ಯಾಯಾಲಯದ ಆದೇಶದ ಮೇರೆಗೆ ನಾನು ಕಮೀಷನರ್ ಕೆಲಸವನ್ನು ಮಾಡಿರುತ್ತೇನೆ. ನಾನು ನ್ಯಾಯಾಲಯಕ್ಕೆ ವರದಿಯನ್ನು ಸಲ್ಲಿಸಿರುತ್ತೇನೆ. ಸಾಕ್ಷಿಯು ತಾವು ಸಲ್ಲಿಸಿದ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ಒಟ್ಟಾಗಿ ನಿಸಿ-೧ ಎಂದು ಗುರುತಿಸಲಾಯಿತು. ಸಾಕ್ಷಿಯು ತಾನು ಮಾಡಿರುವ ನಕ್ಷೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಸಿ-೨ ಎಂದು ಗುರುತಿಸಲಾಯಿತು. ಸಾಕ್ಷಿಯು ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಸಿ-೨ [ಎ] ಎಂದು ಗುರುತಿಸಲಾಯಿತು. ನಾನು ಸರ್ವೆ ಮಾಡುವಾಗ ಸಹದೇವಪ್ಪ, ಲಕ್ಷ್ಮಣರವರು ಹಾಜರಿದ್ದರು. ಕಲ್ಯಾಣಿ, ದತ್ತು ಮತ್ತು ಕಾಶೀರಾಯ ಕೂಡಾ ಹಾಜರಿದ್ದರು. ನಾನು ರಸ್ತೆ ಮತ್ತು ಸರ್ವೆ ನಂಬರ ೭೮ ಎರಡನ್ನು ಅಳತೆ ಮಾಡಿರುತ್ತೇನೆ. ನಾನು ಖಾಸರಾ ಪಹಣಿ ಮತ್ತು ಈಗಿನ ಪಹಣಿಯನ್ನೂ ಕೂಡಾ ನೋಡಿರುತ್ತೇನೆ. ನಾನು ಸದರಿ ಪಹಣಿಗಳನ್ನು ಪರಿಶೀಲಿಸಿ, ನನ್ನ ಸರ್ವೆ ಕೆಲಸವನ್ನು ಮಾಡಿ ವರದಿ ನೀಡಿರುತ್ತೇನೆ.

ಪಾಟೀ ಸವಾಲುಃ ೧ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.